## ಕಡೂರು ಡಿಸ್ಟ್ರಿಕ್ಟು.

ತಾರೀಖು 10ನೇ ಸೆಪ್ಟಂಬರ್ 1884.

ಇದರಿಂದ ಸರ್ವರ ತಿಳುವಳಿಕೆ ಬ್ಗೆ ಪ್ರಕಟಿಸಲ್ಪಡುವದೇನಂದರೆ, ಕಡೂರು ಡಿಸ್ಟ್ರಿಕ್ಟು ತೀರ್ಥಹಳ್ಳಿ ತಾಲ್ಲೂಕು ಗುಡ್ಡದ ಬೀರನಹಳ್ಳಿ ಗ್ರಾಮಕ್ಕೆ ಕೇರಿವ 3ನೇ ಸರ್ವೆ ನಂಬರಿಗೆ ದಾಖಲಾದ ಬಂಜರ್ ಜಮೀನ್ ಪೈಕಿ ಸುಮಾರು 400 ಎಕರೆ ಜಮೀನಿಗಾಗಿ ಕಾಫೀ ನಾಗುವಳಿ ಬ್ಗೆ ದರಖಾಸ್ತು ಬಂದಿರುವದರಿಂದ, ಸದರೀ ಜಮೀನು 1884ನೇ ಇಸವಿ ಅಕ್ಟೋಬರ್ 15ನೇ ಮುಕ್ತಮಿನಲ್ಲಿ ಅಮಲ್ದಾರ್ರು ರೂಬರೂ ತರೀಕೆರೆ ಮೊಕ್ಕಾಮಿನಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಪರಂತು ಸದರೀ ಕ್ರಯವು ಸದರೀ ಜಮೀನಿಗೆ ಮೊಕರರ್ ಮಾಡಲ್ಪಡುವ ಕಂದಾಯವನ್ನು ತೆರುವದಕ್ಕೂ ಮತ್ತು ಯಾವದಾದರೂ ನೀರಿನ ಹಕ್ಕುದಾರಿ ಮತ್ತು ಅವಶ್ಯಕವಾದ ಮಾರ್ಗದ ಹಕ್ಕುದಾರಿ ಯಿವುಗಳ ಉಳಿಸಿಕ್ಕೊಳ್ಳುವಿಕೆಗೂ ವಳಪಟ್ಟಿರತಕ್ಕದ್ದು.

2. ಕ್ರಯದಾರನು ಹರಾಜು ಕೈದಾದ ಕೂಡ್ಲೆ ಕ್ರಯದ ಮೊಬಲಗ್ ಪೈಕಿ ಶೇಕಡಾ 25ರಂತೆ ಆಗುವ ಮೊಬಲಗನ್ನು ಡಿಪಾಜಿಟ್ ಯಿಡತಕ್ಕದ್ದು, ಮತ್ತು ಬಾಕೀ ಕ್ರಯದ ಮೊಬಲಗನ್ನು ಹರಾಜು ತಾರೀಖು ಮೊದಲು 15 ದಿವಸಗಳ ವಳಗಾಗಿ ಪಾವತೀ ಮಾಡದೇ ಯಿದ್ದರೆ, ಹಾಗೆ ಡಿಪಾಜಿಟ್ ಯಿಡೋಣಾದ ಮೊಬಲಗು ಸರಕಾರಕ್ಕೆ ದಂಡವಾಗಿ ಕೇರಿಸಿಕೊಳ್ಳಲ್ಪಡತಕ್ಕದ್ದು.

3. ಹಾಗೆ ಡಿಪಾಜಿಟ್ ಕೊಡದೇ ಹೋದರೆ ಯಾ ಕ್ರಯದ ಬಾಕೀ ಮೊಬಲಗನ್ನು ಪಾವತೀ ಮಾಡದಿದ್ದರೆ ಅವ್ವಲ್ ಕ್ರಯದಾರನ ಖರ್ಚಿಗೂ ವ ಲುಕಸಾನಿಗೂ ವಳಪಟ್ಟು ಸದರೀ ಜಮೀನ್ ಪುನಹಾ ಹರಾಜು ಮಾಡಲ್ಪಡುವದು.

4. ಹರಾಜು ಡೆಪ್ಯೂಟಿ ಕಮ್ಮಿಷನರಿಂದ ಕಾಯಂ ಮಾಡಲ್ಪಡುವ ತನಕ ಜಮೀನಿನ ಹರಾಜು ಕಾಯಮಾದ್ದಾಗಿರತಕ್ಕದ್ದಲ್ಲವು.

5. ಸದರೀ ಜಮೀನಿನ ಚತುರ್ಗಡಿಯು ಇದರಡಿ ಕಾಣಿಸಿರುತ್ತೆ, ಯಿನ್ನೂ ಹೆಚ್ಚಿಗೆ ತಪಸೀಲ್‌ಗಳು ಹರಾಜು ಕಾಲದಲ್ಲಿ ಕೇಳಿ ತಿಳಿದು ಕೊಳ್ಳಬಹುದು, ತಪಸಿಲ್‌ನಲ್ಲಾಗಲಿ ಅಂದಾಜು ಬೀಜವರೀಯಲ್ಲಾಗಲಿ ಯಿರುವ ಗಲ್ಲತ್‌ಗಳಿಗೆ ಸರ್ಕಾರದವರು ಜವಾಬುದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

ಉತ್ತರಕ್ಕೆ—ಶಾಂತಪುರದ ಕಟ್ಟೆ ಹೊಳೆ ಬಳಿಯಣ ಮಾಸಿಕಲ್ ಗಟ್ಟು.
ದಕ್ಷಿಣಕ್ಕೆ—ಸದರೀ ಗ್ರಾಮದ 2—13–14ನೇ ಸರ್ವೆ ನಂಬರುಗಳು.
ಪೂರ್ವಕ್ಕೆ—ತಾಯಗಡಬೋಗಿ ಗ್ರಾಮದ ಸರಹದ್ದು.
ಪಶ್ಚಿಮಕ್ಕೆ—ಬೀರನಹಳ್ಳೀಯಿಂದ ಹಲಸೂರಿಗೆ ಹೋಗುವ ಕಾಲುದಾರಿ.

ಮಹಮ್ಮದಲ್ಲಿ, ಕೆ. ಬಿ., ಅಫಿಷಿಯೇಟಿಂಗ್ ಡೆಪ್ಯೂಟಿ ಕಮ್ಮಿಷನರ್.

---

## ನಗರ ಡಿವೀರ್ಜ್.

### ನಗರ ಡಿವೀರ್ಜ್ ಡಿಸ್ಟ್ರಿಕ್ಟು ಜಡ್ಜೀಯವರ ಕೋರ್ಟ್‌ನಲ್ಲಿ.

1884ನೇ ಇಸವಿ ಅರ್ಜೀ ನಂಬರ್ 85.

ಮೃತಪಟ್ಟ ಅಡಿಕೆಹಳ್ಳಿ ರಾಮಣ್ಣನ ಆಸ್ತಿ ವಿಷಯದಲ್ಲಿ—

ಅರ್ಜೀದಾರಳು ಆಲೂರ ನಾಗಮ್ಮ, ಮೃತಪಟ್ಟ ಸದರೀ ಅಡಿಕೆಹಳ್ಳಿ ರಾಮಣ್ಣನಿಗೆ ಮಗಳು ಆಗಬೇಕೆಂಬ ಹಕ್ಕುದಾರೀ ಮೇಲೆ ಹಾಸನದ ಸ್ಥಳದ ನಾಗಮ್ಮನು ಹಾಸನ ತಾಲ್ಲೂಕು ಆಲೂರು ವಾಸಸ್ಥನಾಗಿ ಮೃತಪಟ್ಟ ಅಡಿಕೆಹಳ್ಳಿ ಪೂಮ್ಮಣ್ಣನ ಜೆಂದಗಿ ಬಗ್ಗೆಗಿ ಬರ ತಕ್ಕ 500 ರೂಪಾಯಿ ಸಾಲಗಳನ್ನು ಸದರೀಯವನ ಮಗ ಮೈನರ್ ಚಂದ್ರಯ್ಯನಿಗೋಸ್ಕರ ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಪೇರಿಗೆ ಸರಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ನಾಗಮ್ಮನ ಅರ್ಜೀಯನ್ನು 1884ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 23ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಅಡಿಕೆಹಳ್ಳಿ ಪೂಮ್ಮಣ್ಣನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಸೆಪ್ಟಂಬರ್ ತಿಂಗಳು 19ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮದಸ್ತಖತ್ತೊಡನೆ ಕೊಡೋಣಾಗಿಧೆ.

ಟಿ. ನರಹರರಾವ್,
ಡಿಸ್ಟ್ರಿಕ್ಟು ಜಜ್ಜ.